ಸರ್ಕಾರದ ಅನುಮತಿ ದೊರೆಯಬೇಕು ಎನ್ನುವ ಮಾತನ್ನು ಸಹ ತಾವು ತಮ್ಮ ಉತ್ತರದಲ್ಲಿ ಹೇಳಿದ್ದೀರಿ. ಅನುಮತಿ ಯಾವಾಗ ದೊರಕಿಸಿಕೊಳ್ಳುತ್ತೀರಿ? ಮತ್ತೊಂದು 1994-95ನೇ ಸಾಲಿನಲ್ಲಿ ತಾವು 1 ಲಕ್ಷ ರೂಪಾಯಿ ಅನುದಾನವನ್ನು ಒದಗಿಸಿದ್ದೀರಿ. 53 ಲಕ್ಷ ರೂಪಾಯಿಗಳ ಯೋಜನೆಗೆ 1 ಲಕ್ಷ ರೂಪಾಯಿ ಅನುದಾನ ಒದಗಿಸಿದರೆ ಏನೂ ಕೆಲಸಆಗುವುದಿಲ್ಲ. ಇದನ್ನು ನೋಡಿದರೆ ಸರ್ಕಾರ ಈ ಕೆಲಸವನ್ನು ಪೂರ್ಣಗೊಳಿಸಬೇಕೆನ್ನುವ ಇಚ್ಛೆ ಇದೆ ಎನ್ನುವಂತಾಗುವುದಿಲ್ಲ. ದಯಮಾಡಿ ಈ ಬ್ಯಾರೇಜ್ ಕೆಲಸ ಮಾಡಿದರೆ 4-6 ತಾಲ್ಲೂಕುಗಳಿಗೆ ಉಪಯೋಗವಾಗುತ್ತದೆ. ಆದ್ದರಿಂದ ಸರ್ಕಾರ ತ್ವರಿತಗತಿಯಲ್ಲಿ ಜನಗಳಿಗೆ ಉಪಯೋಗವಾಗುವಂತಹ ಈ ಕೆಲಸವನ್ನು ಪೂರ್ಣ ಮಾಡಿಕೊಡಬೇಕೆಂದು ನಾನು ಕೇಳಿಕೊಳ್ಳುತ್ತೇನೆ ಮತ್ತು ಪರಿಷ್ಕೃತ ಅಂದಾಜು 53 ಲಕ್ಷ ರೂಪಾಯಿಗಳ ಹಣವನ್ನು ಸರ್ಕಾರ ಯಾವಾಗ ಬಿಡುಗಡೆ ಮಾಡುತ್ತದೆ ಎನ್ನುವ ಮಾತನ್ನು ನಿಖರವಾಗಿ ಹೇಳಬೇಕು.

ಶ್ರೀ ಎಂ.ಪಿ. ಕೇಶವಮೂರ್ತಿ : ಮಾನ್ಯ ಅಧ್ಯಕ್ಷರೇ, ಈ ಒಂದು ಯೋಜನೆಯನ್ನು 1986ನೇ ಇಸವಿ ಜನವರಿ ತಿಂಗಳಲ್ಲಿ ಪ್ರಾರಂಭ ಮಾಡಿದ್ದು 14 ಲಕ್ಷ 10 ಸಾವಿರ ರೂಪಾಯಿಗಳನ್ನು ಈ ಯೋಜನೆಯಡಿಯಲ್ಲಿ ಒದಗಿಸಿಕೊಟ್ಟು ಜಿಲ್ಲಾಪರಿಷತ್ತು ವತಿಯಿಂದ ಕಾಮಗಾರಿ ಪ್ರಾರಂಭವಾಗಿದ್ದು, ತದನಂತರ ಇದನ್ನು ಕರ್ನಾಟಕ ರಾಜ್ಯ ನಿರ್ಮಾಣ ನಿಗಮ ಇವರಿಗೆ ವಹಿಸಿಕೊಟ್ಟು 1988ನೇ ಇಸವಿಯಲ್ಲಿ ಕೆಲಸ ಪ್ರಾರಂಭವಾಗಿದೆ. ಈಗಾಗಲೇ ಇದಕ್ಕೆ 9.79 ಲಕ್ಷ ರೂಪಾಯಿಗಳ ಹಣವನ್ನು ಖರ್ಚು ಮಾಡಿದೆ. ಆದರೆ 1988-89ನೇ ಸಾಲಿನ ಬಜೆಟ್‌ನಲ್ಲಿ ಈ ಯೋಜನೆಯನ್ನು ಸೇರಿಸಿಲ್ಲ. ಆ ಕಾರಣದಿಂದ ಜಿಲ್ಲಾ ಪರಿಷತ್ ಈ ಕಾಮಗಾರಿಯನ್ನು ನಿಲ್ಲಿಸಿದರು. ಅದಾದ ನಂತರ ನಾವು ವರ್ಗಾವಣೆ ಮಾಡಿದ್ದೇವೆ. ಈಗ ನಾವು 30 ಲಕ್ಷ ರೂಪಾಯಿಗಳ ಬಾಕಿ ಕೊಡಬೇಕಾಗಿದೆ. 94-95ನೇ ಸಾಲಿನಲ್ಲಿ ಆಯವ್ಯಯದಲ್ಲಿ ಇದಕ್ಕೆ 1ಲಕ್ಷ ರೂಪಾಯಿಗಳನ್ನು ಇಟ್ಟಿದ್ದೇವೆ. ಇನ್ನು ಇದಕ್ಕೆ 53 ಲಕ್ಷ ರೂಪಾಯಿಗಳು ಬೇಕಾಗಿದೆ. ಈಗ ಆಡಳಿತಾತ್ಮಕ ಮಂಜೂರಾತಿ ಮಂಜೂರಾತಿ ಈ ವಿಷಯದಲ್ಲಿ ಕೊಟ್ಟು ಆದ್ಯತೆ ಮೇರೆಗೆ ಕೆಲಸವನ್ನು ಪ್ರಾರಂಭ ಮಾಡುತ್ತೇವೆ.

ದಿನದ ಪಟ್ಟಿಯಲ್ಲಿ ಸೇರಿಸಲಾದ ಪ್ರಶ್ನೋತ್ತರಗಳು

ಆರಾಧನಾ ಯೋಜನೆ

541 - ಶ್ರೀ ಜಿ. ಪುಟ್ಟಸ್ವಾಮಿ ಗೌಡ (ಹೊಳೆನರಸೀಪುರ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) 1993-94ನೇ ಸಾಲಿನಲ್ಲಿನ ಆರಾಧನಾ ಯೋಜನೆಯಡಿಯಲ್ಲಿ ಹೊಳೆ ನರಸೀಪುರ ತಾಲ್ಲೂಕಿಗೆ ಮುಜರಾಯಿ ದೇವಸ್ಥಾನಗಳಿಗಾಗಿ ಬಿಡುಗಡೆಯಾದ ಹಣವೆಷ್ಟು?

ಆ) 1993-94ನೇ ಸಾಲಿನಲ್ಲಿ ಯಾವ ಯಾವ ಮುಜರಾಯಿ ದೇವಸ್ಥಾನಗಳಿಗೆ ಈ ಯೋಜನೆಯಡಿಯಲ್ಲಿ ಹಣವನ್ನು ನೀಡಲಾಗಿದೆ?

ಇ) 1994-95ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಇಲ್ಲಿಯವರೆಗೆ ಬಿಡುಗಡೆ ಮಾಡಿದ ಹಣವೆಷ್ಟು?

ಈ) ಅವುಗಳ ಪೈಕಿ ಹೊಳೆನರಸೀಪುರ ತಾಲ್ಲೂಕಿಗೆ ಎಷ್ಟು ಹಣವನ್ನು ಬಿಡುಗಡೆ ಮಾಡಲಾಗಿದೆ?

ಉ) ಎಲ್ಲಾ ತಾಲ್ಲೂಕುಗಳಿಗೂ ಒಂದೇ ಪ್ರಮಾಣದಲ್ಲಿ ಹಣವನ್ನು ಬಿಡುಗಡೆ ಮಾಡಲಾಗುವುದೇ?

ಶ್ರೀ ಹಾರ್ನಳ್ಳಿ ರಾಮಸ್ವಾಮಿ (ಕಾನೂನು ಮತ್ತು ಮುಜರಾಯಿ ಸಚಿವರು) :

ಅ) ರೂ 3.20 ಲಕ್ಷ ಬಿಡುಗಡೆ ಮಾಡಲಾಗಿದೆ.

ಆ) 1) ಶ್ರೀಲಕ್ಷ್ಮೀದೇವರು, ಎಚನಹಳ್ಳಿ 25,000-00 (ನಿರ್ಮಾಣ)

(2) ಶ್ರೀ ಶಂಬುಲಿಂಗೇಶ್ವರಸ್ವಾಮಿ ದೇವರು ಅಂಬೇಡ್ಕರ್ ನಗರ ಹೊಳೆನರಸೀಪುರ ಟೌನ್ 25,000-00 (ರಿಪೇರಿ)

(3) ಶ್ರೀ ಚನ್ನವೀರಸ್ವಾಮಿ ತೇಜೂರು 25,000-00 (ನಿರ್ಮಾಣ)

(4) ಶ್ರೀ ಕನ್ನಂಬಾಡಿಅಮ್ಮ ರಂಗೇನಹಳ್ಳಿ 25,000-00 (ನಿರ್ಮಾಣ)

ಇ) 1994-95ನೇ ಸಾಲಿನಲ್ಲಿ ಆರಾಧನಾ ಯೋಜನೆಯಡಿಯಲ್ಲಿ ಈವರೆಗೆ 2 ಕೋಟಿ ರೂಗಳನ್ನು ಬಿಡುಗಡೆ ಮಾಡಿದ್ದು ಆ ಪೈಕಿ ಹಾಸನ ಜಿಲ್ಲೆಗ 7,14,285-00 ರೂ.ಗಳನ್ನು ನಿಗದಿಸಿದೆ.

ಈ) ಹಾಸನ ಜಿಲ್ಲೆಗೆ ನೀಡಲಾದ ಒಟ್ಟು ಹಣದಲ್ಲಿ ಪ್ರತಿವಿಧಾನ ಸಭಾ ಕ್ಷೇತ್ರಕ್ಕೆ ರೂ. 89285 ಗಳಂತೆ ಹೊಳೆ ನರಸೀಪುರ ಕ್ಷೇತ್ರಕ್ಕೆ ರೂ. 89,285-00 ರೂ.ಗಳು ನೀಡಬಹುದಾಗಿದೆ.

ಉ) ಹೌದು.

ಬ್ರಹ್ಮಾವರ ಕ್ಷೇತ್ರದಲ್ಲಿ ರಸ್ತೆ ದೀಪಗಳು

200 - ಶ್ರೀ ಪಿ. ಬಸವರಾಜ್ (ಬ್ರಹ್ಮಾವರ) : ಮಾನ್ಯ ಇಂಧನ ರಾಜ್ಯ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬ್ರಹ್ಮಾವರ ವಿಧಾನ ಸಭಾ ಕ್ಷೇತ್ರದ ವ್ಯಾಪ್ತಿಯಲ್ಲಿ ರಾಷ್ಟ್ರೀಯ ಮತ್ತು ರಾಜ್ಯ ಹೆದ್ದಾರಿಗಳ ಪಕ್ಕದಲ್ಲಿ ಬಹುತೇಕ ಬೀದಿ ದೀಪಗಳು ರಾತ್ರಿ ವೇಳೆಯಲ್ಲಿ ಉರಿಯದೇ ಇರುವುದು ವಿದ್ಯುತ್ ಮಂಡಳಿಯ ಗಮನಕ್ಕೆ ಬಂದಿದೆಯೇ, ಬಂದಿದ್ದಲ್ಲಿ ಕೈಗೊಂಡ ಕ್ರಮಗಳೇನು?

ಆ) ಇದರಿಂದಾಗಿ ರಾತ್ರಿ ವೇಳೆಯಲ್ಲಿ ಸಂಚರಿಸುವ ವಾಹನಗಳಿಗೆ ಹಾಗೂ ಸಾರ್ವಜನಿಕರಿಗೆ ತೀವ್ರ ತರಹದ ತೊಂದರೆಗಳು ಉಂಟಾಗಿ ಸಂಚಾರಕ್ಕೆ ಅನಾನುಕೂಲವಾಗಿರುವುದು ನಿಜವಲ್ಲವೇ, ಮಂಡಳಿಯು ಈ ಸಮಸ್ಯೆಯನ್ನು ಪರಿಹರಿಸಲು ಸಕಾಲಿಕ ಕ್ರಮಗಳನ್ನು ಕೈಗೊಳ್ಳುವುದೇ?

ಶ್ರೀ ವಿ. ಮುನಿಯಪ್ಪ (ಇಂಧನ ರಾಜ್ಯ ಸಚಿವರು) :

ಅ) ಮತ್ತು ಆ) ಹೌದು ಬಂದಿದೆ. ಕೆಟ್ಟಿರುವ ಬೀದಿ ದೀಪಗಳ ದುರಸ್ತಿ ಕಾರ್ಯವನ್ನು ಸಂಬಂಧಿಸಿದ ಗ್ರಾಮ ಪಂಚಾಯಿತಿ ಮತ್ತು ಪುರಸಭೆಗಳೇ ನಿರ್ವಹಿಸುತ್ತಿವೆ. ದುರಸ್ತಿಪಡಿಸಲಾದ ಕೊಳವೆ ದೀಪಗಳ ಫಿಟ್ಟಿಂಗ್‌ಗಳನ್ನು ಗ್ರಾಮ ಪಂಚಾಯಿತಿ : ಪುರಸಭೆ ಒದಗಿಸಿದ ನಂತರ, ಮಂಡಳಿ ಅಳವಡಿಸುವ ಕ್ರಮ ತೆಗೆದುಕೊಳ್ಳುತ್ತದೆ.

ಕೋಟೆ ವೆಂಕಟರಮಣ ಸ್ವಾಮಿ ದೇವಸ್ಥಾನದ ಆಸ್ತಿ ಕುರಿತು

535 - ಶ್ರೀ ಕೆ. ಸೋಮಪ್ಪ ಸುವರ್ಣ (ಮೂಡಬಿದರೆ) : ಮಾನ್ಯ ಮುಜರಾಯಿ ಸಚಿವರು ಈ ಕೆಳಕಂಡ ಪ್ರಶ್ನೆಗಳಿಗೆ ದಯವಿಟ್ಟು ಉತ್ತರಿಸುವರೇ?

ಅ) ಬೆಂಗಳೂರು ನಗರದ ಕೋಟೆ ವೆಂಕಟರಮಣ ಸ್ವಾಮಿ ದೇವಾಲಯಕ್ಕೆ ಸೇರಿದ ಆಸ್ತಿಯ ವಿವರಗಳೇನು: (ಕಟ್ಟಡ ಹಾಗೂ ಜಾಗದ ಬಗ್ಗೆ ಪ್ರತ್ಯೇಕ ವಿವರಗಳನ್ನು ಒದಗಿಸುವುದು).

ಆ) ಈ ದೇವಾಲಯಕ್ಕೆ ದಾನವಾಗಿ ಕೊಟ್ಟಿರುವ ಜಾಗ ಇಲ್ಲವೆ ಕಟ್ಟಡದ ವಿವರಗಳೇನು?